*ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ*
(Kristu Jayanti Kannada Sanshodhana Patrike)
*ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 35 – 47*

# ಸೌಂದರ್ಯದ ಶುಚಿ

**ಡಾ. ರವಿಶಂಕರ್ ಎ.ಕೆ.**
*ಸಹಾಯಕ ಪ್ರಾಧ್ಯಾಪಕ*
*ಕ್ರಿಸ್ತು ಜಯಂತಿ ಕಾಲೇಜು ಸ್ವಾಯತ್ತ, ಬೆಂಗಳೂರು*
Email: ravishankar@kristujayanti.com

**ಕನ್ನಡವೂ ಕನ್ನಡಿಸಲಿ**
**ನಾಳೆ ಬಾಳಿನೊಸಗೆಯ;**
**ಜೀವನಕಲೆ ಬೆಳಗಲಲ್ಲಿ**
**ತಿಳಿದು ಕರಣ ಹಸುಗೆಯ;**
**ಪೂರ್ಣಪ್ರಜ್ಞರಾಗಿ ಪಡಲಿ**
**ಜೀವ–ದೇವ ಬೆಸುಗೆಯ.**
**(ಸ್ವಾತಂತ್ರದೇವಿಗೆ: ಸೂರ್ಯಪಾನ)**

ಕಾವ್ಯವೆಂಬ ಸೌಂದರ್ಯವನ್ನು ಶುಚಿಗೊಳಿಸುವ ಕಾರ್ಯ ವಿಮರ್ಶಕನದು. ಶಿಲೆಯನ್ನು ಶುಚಿಗೊಳಿಸಿ, ಮೂರ್ತಿ ಸ್ವರೂಪ ನೀಡುವ ಶಿಲ್ಪಿಯಾಗಿ ವಿಮರ್ಶಕರು ಕಂಡುಬರುತ್ತಾರೆ. ಇವರಲ್ಲಿ ಅಧ್ಯಯನದ ಶುದ್ಧತೆ ತುಂಬಾ ಮುಖ್ಯವಾದುದು. ಜಗತ್ತಿನ ಎಲ್ಲಾ ಭಾವ ಸ್ವರೂಪವೂ ಕಾವ್ಯತತ್ವದ ಮೇಲೆ ರಚನೆಗೊಂಡಿದೆ. ಆದರೆ ಕಾವ್ಯದಲ್ಲಿಯೇ ಉಳಿದಿಲ್ಲ. ಗದ್ಯದ ವಿವಿಧ ಮಾದರಿಗಳಿಗೆ ತೆರೆದುಕೊಂಡಿದೆ. ಲೋಕವನ್ನು ಆಸ್ವಾದಿಸುವ ಸಹೃದಯನೊಳಗೆ ಈ ವಿಮರ್ಶಕ ಸೃಷ್ಟಿಗೊಳ್ಳುತ್ತಾನೆ. ಸಹೃದಯತೆಯ ಚಿಕಿತ್ಸಾ ಗುಣವೇ ವಿಮರ್ಶನ ಶಕ್ತಿ. ದೈನಂದಿನ ಎಲ್ಲಾ ವ್ಯವಹಾರಗಳಿಂದಲೂ, ಸಾಹಿತ್ಯದ ತತ್ತ್ವ ಚಿಂತನೆಯವರೆಗೆ ಈ ಸಹೃದಯತೆ ಹಾಗೂ ವಿಮರ್ಶಾ ಚಿಂತನೆಯಗಳು ಸದಾ ಪುನರಾವರ್ತನೆಗೊಳ್ಳುತ್ತವೆ.

ಈ ಲೇಖನದಲ್ಲಿ ಸೌಂದರ್ಯ, ವಿಮರ್ಶೆ, ವಿಮರ್ಶಕ, ಚಿಕಿತ್ಸಕ, ಸಾಹಿತ್ಯ ಶುಚಿ ಮೊದಲಾದ ಪದಗಳನ್ನು ವಿಶೇಷವಾಗಿ ಗಮನಿಸಲಾಗಿದೆ.

ವಿಮರ್ಶೆ ಎಂದರೇನು? ಇದು ಹಲವು ಉತ್ತರಗಳನ್ನು ನಿತ್ಯ ಪಡೆಯುತ್ತಿರುವ ಅರ್ಥಪೂರ್ಣ ಪ್ರಶ್ನೆ ಎನ್ನಬಹುದು. ಪರಿಸರ, ವಿಷಯ, ಕ್ಷೇತ್ರ ತಮ್ಮ ತಮ್ಮ ಆಯ್ಕೆಯಲ್ಲಿ ತಮಗೆ ಕಾಣ ಸಿಗುವಂತೆ ಉತ್ತರಗಳು ದೊರೆಯುತ್ತಿವೆ. **ಸೌಂದರ್ಯದ ಶುಚಿ** ಎಂಬುದು ವಿಮರ್ಶೆಯ ವಿಧಾನವಾಗಿದೆ. ಸೌಂದರ್ಯವೆಂದರೇನು? ಎಂಬ ಪ್ರಶ್ನೆಯನ್ನು ವಿಶಾಲವಾಗಿ ಗ್ರಹಿಸಿದರೆ ಅದರ ಸ್ವರೂಪವೇ ಹೊಸ ಅರ್ಥಗಳ ಸಾಧ್ಯತೆಗಳನ್ನು ತಿಳಿಸುತ್ತದೆ. ಒಂದು

ಚೆಲುವನ್ನು ನೋಡಿ ಇದೇ ಸೌಂದರ್ಯವೆಂದು ಗ್ರಹಿಸುವುದು ಸರಳವಾದ ಅರ್ಥ. ಇದೇ ಅರ್ಥದಲ್ಲಿ ಗಹನವಾದ ವಿಚಾರವೂ ಅಡಗಿದೆ. ಒಂದು ಚೆಲುವಿನ ವ್ಯಾಖ್ಯಾನವು ನೋಡುವ ನೋಟದಲ್ಲಿ ಇದೆಯೇ ಹೊರೆತು, ವಸ್ತುವಿನಲ್ಲಿ ಅಲ್ಲ. ಜಗತ್ತಿನ ಎಲ್ಲಾ ಅನುಭಾವಿಗಳು ಇದೇ ಅರ್ಥವನ್ನು ವ್ಯಾಖ್ಯಾನಿಸುತ್ತಾ ಸಾಗಿದ್ದಾರೆ. ಹಾಗದರೆ ಸುಂದರವಿಲ್ಲದ ಒಂದು ವಸ್ತು, ಜೀವಿಯಲ್ಲಿ ಸೌಂದರ್ಯವನ್ನು ಹೇಗೆ ಕಾಣುವುದು ಎಂಬ ಸರಳ ಪ್ರಶ್ನೆ ಮೂಡಬಹುದು. ಹಾಗಾದರೆ ಬಾಹ್ಯ ಆಕಾರ ಮಾತ್ರ ಸುಂದರವೆಂಬ ಅರ್ಥದಲ್ಲಿ ಇಂದಿನ ಸಮಾಜದ ನೋಟಗಳು ತೀರ್ಮಾನಕ್ಕೆ ಸಿಲುಕಿವೆ. ವಚನಕಾರರು ಇದೇ ವಿಚಾರವನ್ನು ಸರಳವಾಗಿ ವ್ಯಾಖ್ಯಾನಿಸುತ್ತಾ ಅಂತರಂಗ ಶುದ್ಧಿ–ಬಹಿರಂಗ ಶುದ್ಧಿ ಎಂಬ ಪರಿಕಲ್ಪನೆ ನೀಡಿದರು. ಪ್ರತಿಯೊಂದು ವಸ್ತು, ಜೀವದ ಸೌಂದರ್ಯ ಅಭಿವ್ಯಕ್ತಿಯು ಅಂತರಂಗದ ಪ್ರತಿನಿಧೀಕರಣವೇ ಹೊರೆತು, ಬಹಿರಂಗದ ಸ್ವರೂಪವಲ್ಲ. ಒಂದು ಶಿಲೆ ನೋಡಲು ಸುಂದರವಿಲ್ಲದಿದ್ದರೂ ಅದರಿಂದ ಮೂರ್ತಿಯ ಸ್ವರೂಪ ಮೂಡಬಹುದು. ಅದು ಒಬ್ಬ ಶಿಲ್ಪಿಯ ಹಾಗೂ ಶಿಲೆಯ ಅಂತರಂಗದ ಅಭಿವ್ಯಕ್ತಿ. ಹಾಗಾದರೆ ಈ ಸೌಂದರ್ಯವೆಂಬುದು ಎಲ್ಲಾ ವಿಚಾರದಲ್ಲೂ ಅಡಗಿರುತ್ತದೆ. ಆದರೆ ಅದನ್ನು ನೋಟದಲ್ಲಿ ಮಾತ್ರ ಅದರ ಶುಚಿತ್ವ ಕಾಣುತ್ತದೆ ಎಂಬ ತೀರ್ಮಾನವೇ ಈ ಪ್ರಬಂಧದ ಉದ್ದೇಶವಾಗಿದೆ.

ಪ್ರಕೃತಿಯು ಸುಂದರವಾಗಿ ಕಾಣುವ ಸಹಜರೂಪ. ಅದರ ಸೌಂದರ್ಯದ ಸ್ವರೂಪವನ್ನು ಪ್ರತಿಕ್ಷಣವು ತನ್ನ ವಾತಾವರಣದ ಮೂಲಕ ಬದಲಾಯಿಸುತ್ತಾ ಸೌಂದರ್ಯದ ವ್ಯಾಖ್ಯಾನವನ್ನು ವಿಸ್ತರಿಸುತ್ತಿರುತ್ತದೆ. ಬಿಸಿಲಿನಲ್ಲಿ ಬಯಲೂ ಕೂಡ ಒಂದು ಸುಂದರ ರೂಪವೇ ಆಗಿದೆ. ಆದರೆ ನಾವು ಈಗಾಗಲೇ ಒಂದು ಸಿದ್ಧ ಮಾದರಿಯ ವ್ಯಾಖ್ಯಾನಕ್ಕೆ ಅಂಟಿಕೊಂಡು ಮನಸ್ಸಿಗೆ ಮುದನೀಡುವ ಅಂದರೆ ಸುಖವನ್ನು ಒದಗಿಸುವ ಅಂಶಗಳನ್ನು ಮಾತ್ರ ಸೌಂದರ್ಯದ ಪರಿಧಿಯಲ್ಲಿ ತಂದಿರುತ್ತೇವೆ. ಆದರೆ ದುಃಖದೊಳಗಿನ ಸೌಂದರ್ಯವೂ ನೋವಿನ ಪರಿಣಾಮವನ್ನು ಉಂಟುಮಾಡುವ ಕ್ರಿಯೆಯನ್ನು ನಾವು ತಿಳಿಯಲಾರದ ಸ್ಥಿತಿಯಲ್ಲಿದ್ದೇವೆ. ಸೌಂದರ್ಯವೆಂದರೆ ನೋಟವನ್ನು ಪ್ರತಿಕ್ರಿಯಿಸುವಂತಹದ್ದು. **ರಾಮಮನೋಹರ ಲೋಹಿಯಾ** ಅವರು ತಮ್ಮ **'ಸೌಂದರ್ಯ ಮತ್ತು ಮೈಬಣ್ಣ'** ಎಂಬ ಲೇಖನದಲ್ಲಿ ಸೌಂದರ್ಯ ಕುರಿತು ಸೂಕ್ಷ್ಮವಾದ ಪೀಠಿಕೆ ನೀಡಿದ್ದಾರೆ. "ಮನುಷ್ಯನ ಮೈಬಣ್ಣ ಸೌಂದರ್ಯಕ್ಕೆ ಒಂದು ಪ್ರಮಾಣವಲ್ಲ ಅಥವಾ ಅದು ಮತ್ತಾವುದೇ ಬಗೆಯ ಶ್ರೇಷ್ಠತೆಯ ಪ್ರಮಾಣವೂ ಅಲ್ಲ. ಹಾಗಿದ್ದರೂ ಚಂದವಾದ ಮೈಬಣ್ಣ ಮತ್ತು ಸೌಂದರ್ಯ ಇವೆರಡೂ ಒಂದೇ ಎಂಬಂತೆ ನಾವು ತಿಳಿಯುತ್ತೇವೆ. ಯೂರೋಪಿನ ಬಳಿ ನೆಲದಲ್ಲಿ ಮಾತ್ರವಲ್ಲ, ಏಷ್ಯ ಅಥವಾ ಅಮೇರಿಕಾದ ಉಷ್ಣ ಹವೆಯಲ್ಲಿ ಕೂಡ ಇದೇ ಭಾವನೆ ಮತ್ತಷ್ಟು ಹೆಚ್ಚಾಗಿಯೇ ಇದೆ. ಸೌಂದರ್ಯ ಮೀಮಾಂಸೆಯ ಈ ಅಪಮಾರ್ಗ ವಿವರಣೆಗೆ ನಿಲುಕದಂಥದ್ದು"[1] ಹೀಗೆ ಲೋಹಿಯಾ ಹೇಳುವಲ್ಲಿ ಸಮಾಜಿಕ ವಿಚಾರಗಳೇ ಅಡಗಿದ್ದರೂ ಸಾಹಿತ್ಯದೊಳಗೂ, ಕೃತಿಯ ಸ್ವರೂಪಕ್ಕೂ ಇದೇ ಮೀಮಾಂಸೆ ಮತ್ತೆ ಮತ್ತೆ ತಳುಕಾಗಿ ಬರುತ್ತದೆ. ನೋಡುವ ನೋಟದ ವಿಮರ್ಶೆಯು ನಮಗೆ

ಮುಖ್ಯವಾಗುತ್ತದೆ. ಬೇಂದ್ರೆ ಈ ವಿಚಾರವನ್ನು 'ಕಣ್ಣಿಗೂ ಕಣ್ಣಾಗಿ ಒಳಗಿಹುದು' ಎನ್ನುತ್ತಾ ಒಳಗಣ್ಣಿನ ಅಂತರಂಗದ ಕ್ರಿಯೆಯ ಕುರಿತು ವ್ಯಾಖ್ಯಾನಿಸಿದ್ದಾರೆ. ಕಾಣುವ ಸ್ವರೂಪದಲ್ಲಿ ಕೇವಲ ಆನಂದ ಪಡುವುದು ಮಾತ್ರವೇ ಸೌಂದರ್ಯವಲ್ಲ. ನವರಸಗಳ ಜೊತೆಗೆ ಭಕ್ತಿರಸವೂ ಸೇರಿ ಈ ಹತ್ತುರಸಗಳಿಗೂ ಮೀರಿದ ಎಲ್ಲಾ ಅಭಿವ್ಯಕ್ತಿಯಲ್ಲೂ ಸೌಂದರ್ಯದ ವ್ಯಾಖ್ಯಾನವಿದೆ. ಇಂತಹ ಜ್ಞಾನಶಾಖೆಯಿಂದ ರಚನೆಯಾಗುವುದೇ ಉತ್ತಮ ಸಾಹಿತ್ಯ. ಅದು ಸಹೃದಯನ ಒಳಗಣ್ಣಿನ ಭಾವಕೋಶದಲ್ಲಿ ಬದಲಾವಣೆಗಳನ್ನು ಸೃಷ್ಟಿಸುತ್ತದೆ. ಅದುವೇ ಸಾಹಿತ್ಯ ಪ್ರಯೋಜನ.

**ಕವಿ ಆಂಡಯ್ಯನು** ಕಬ್ಬಿಗರ ಕಾವಂ ಕೃತಿಯಲ್ಲಿ "ಆವನ ಗಾಡಿ ನೋಡಿದವರಂ ಸಲೆ ಸೋಲಿಸುತಿರ್ಪುದುರ್ಕಿನಿಂ"[೨] ಎಂದು ಪ್ರಾರಂಭಮಾಡುವನು. 'ಯಾರ ಸೌಂದರ್ಯವು ನೋಡಿದವರನ್ನೆಲ್ಲಾ ಸೋಲಿಸುತ್ತಿರುವುದೋ' ಅಂತಹ ಕಾಮನ ಅನುಗ್ರಹವನ್ನು ತನ್ನ ಚತುರೋಕ್ತಿಗೆ ಬೇಡುತ್ತಾನೆ. ಆಂಡಯ್ಯನು ಯಾವ ಅರ್ಥದಲ್ಲಿ ಧ್ವನಿಸಿರುವನೋ, ಆದರೆ ಅದರ ಒಳ ಅರ್ಥಗಳು ನಮ್ಮ ಈ ಕಾಲದ ಅಧ್ಯಯನಕ್ಕೆ ವಿಮರ್ಶೆಯ ಹೊಸ ಮಾದರಿಯಂತೆ ಕಾಣುತ್ತದೆ. ಇಲ್ಲಿ ಸೌಂದರ್ಯವೆಂಬುದು ಬಾಹ್ಯವಷ್ಟೇ ಅಲ್ಲ. ಕಾಮವೆಂದರೆ ಅಂತರಂಗ–ಬಹಿರಂಗಗಳೆರಡರ ಜೊತೆಗೂ ಮೀರಿದ ಶಕ್ತಿಯ ಇನ್ನೊಂದು ಅರ್ಥವಿದೆ. ಈ ವಿಶಾಲ ಅರ್ಥದ ಸೌಂದರ್ಯ ಸ್ವೀಕಾರವು ವಿಮರ್ಶೆಯ ಅರ್ಥಗಳನ್ನು ವಿಸ್ತರಿಸುತ್ತದೆ.

**ಟಿ. ಎಸ್. ಎಲಿಯಟ್** ಅವರು ಕಾವ್ಯಕ್ರಿಯೆಯಲ್ಲಿ ವಿಮರ್ಶೆಯ ಪಾತ್ರವನ್ನು ಚಿಂತಿಸುತ್ತಾ ಹೀಗೆ ತಿಳಿಸಿದ್ದಾರೆ. "ನಿಜವಾಗಿಯೂ ಸಾಹಿತಿಯ ಕಸುಬಿನ ಹೆಚ್ಚು ಅಂಶ ಸೃಷ್ಟಿ ಕಾರ್ಯಕ್ಕಿಂತ ಅದರ ವಿಮರ್ಶನ ಕಾರ್ಯದಲ್ಲಿ; (ಪದಗಳನ್ನು) ಬದಲಾಯಿಸುವ, ಬೆಸೆಯುವ, ಕಟ್ಟುವ, ಹೊಡೆದು ಹಾಕುವ, ತಿದ್ದುವ ಮತ್ತು ಪರೀಕ್ಷಿಸುವ ಕಾರ್ಯ: ಹೆದರಿಕೆ ಹುಟ್ಟಿಸುವಂತಹ ಈ ಪರಿಶ್ರಮ ಎಷ್ಟರಮಟ್ಟಿಗೆ ವಿಮರ್ಶಾತ್ಮಕವೋ ಅಷ್ಟೇ ಸೃಷ್ಟ್ಯಾತ್ಮಕ. ನಾನು ಇನ್ನೂ ಸಮರ್ಥಿಸುವುದೇನೆಂದರೆ ನುರಿತ ಹಾಗೂ ಕುಶಲ ಬರೆಹಗಾರ ತನ್ನ ಬರವಣಿಗೆಯನ್ನೇ ಕುರಿತು ಮಾಡಿಕೊಳ್ಳುವ ವಿಮರ್ಶೆ ಸತ್ವಪೂರ್ಣವಾದದ್ದಷ್ಟೇ ಅಲ್ಲ, ಅತ್ಯುತ್ತಮವಾದ ವಿಮರ್ಶೆ; ಮತ್ತು (ನಾನು ಮೊದಲೇ ಹೇಳಿದಂತೆ) ಕೆಲವು ಸಾಹಿತಿಗಳು ಉಳಿದವರಿಗಿಂತ ಶ್ರೇಷ್ಠರಾಗುವುದಕ್ಕೆ ಒಂದೇ ಕಾರಣ ಅವರ ವಿಮರ್ಶನಶಕ್ತಿಯ ಹಿರಿಮೆ"[೩]. ಒಂದು ಸುಂದರ ವಿಗ್ರಹದ ಸೌಂದರ್ಯವು ಅದರ ಹಲವು ವಿಮರ್ಶಾ ಚಿಂತನೆಗಳ ಮೂಲಕ ಶುಚಿಗೊಂಡಿರುತ್ತದೆ. ಈ ಶುಚಿಗೊಳಿಸುವ ಕಾರ್ಯವೇ ವಿಮರ್ಶೆ. ಶುಚಿಗೊಂಡಷ್ಟೂ ಅದರ ಸೌಂದರ್ಯವು ಭವ್ಯವಾಗುತ್ತದೆ.

ಒಬ್ಬ ಕವಿಯ ಕೃತಿಯು ವಿಮರ್ಶೆಯೆಂಬ ಒಳನೋಟದಿಂದ ಸಾಣೆಗೊಂಡು ಸೌಂದರ್ಯವನ್ನು ಪಡೆಯುತ್ತದೆ. ಓದುಗನು ಅದನ್ನು ಶುಚಿಗೊಳಿಸುವ ಕಾರ್ಯದ ಮೂಲಕ ಸಹೃದಯನಾಗಿ

ಸಂಪುಟ 1, ಸಂಚಿಕೆ 1, ಮಾರ್ಚ್ 2022, ಪುಟಗಳು 35 – 47

ಪರಿವರ್ತನೆಗೊಳ್ಳುತ್ತಾನೆ. ಇಂತಹ ಶುಚಿಗೊಳಿಸುವ ಕಾರ್ಯಕ್ಕೆ ಹಲವು ಪ್ರವೇಶಿಕೆಗಳನ್ನು ಕವಿಯು ತನ್ನ ಸಾಹಿತ್ಯದ ಅಥವಾ ಸಮಕಾಲೀನ ಸಾಹಿತ್ಯದ ಒಳಗೆ ಕಾಣಿಸಿರುತ್ತಾನೆ. ಅದನ್ನು ತುಂಬಿಕೊಳ್ಳುವ ಒಳನೋಟವು ಓದುಗನಲ್ಲಿ ಸೃಷ್ಟಿಗೊಳ್ಳಬೇಕು. ಕನ್ನಡ ಸಾಹಿತ್ಯದ ಪ್ರಜ್ಞಾವಂತ ಕವಿಗಳೆಲ್ಲರೂ ಇಂತಹ ಸೃಜನಶೀಲ ಕಾರ್ಯವನ್ನು ಸಚೇತನಗೊಳಿಸಿರುವುದನ್ನು ಕಾಣಬಹುದು.

**ದ. ರಾ. ಬೇಂದ್ರೆ** ಅವರ ಸಾಹಿತ್ಯ ಅಧ್ಯಯನದಲ್ಲಿ ಇಂತಹ ಸೌಂದರ್ಯಗಳನ್ನು ಪ್ರತಿಕವಿತೆಯಲ್ಲೂ ಸ್ಫುಟವಾಗಿ, ನಿಚ್ಚಳವಾಗಿ ಕಾಣಬಹುದು. ಅಂತಹ ಸುದೀರ್ಘ ನೋಟದಲ್ಲಿ ವಿಮರ್ಶೆ ಎಂದರೇನು? ಕಾವ್ಯದ ಕ್ರಿಯೆಯು ವಿಮರ್ಶೆಯ ರೂಪಗಳನ್ನು ಹೇಗೆ ತೆರೆದುಕೊಳ್ಳುತ್ತದೆ ಎಂಬ ವಿಚಾರವನ್ನು ಬೇಂದ್ರೆ ಅವರ ಕವಿತೆಗಳ ಮೂಲಕ ಅಧ್ಯಯನಮಾಡಬಹುದು. ಕೆಲವು ಮಾದರಿಗಳನ್ನು ಇಲ್ಲಿ ಗಮನಿಸಲಾಗಿದೆ.

**'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ**
**ಕಣ್ಣಿಗು ಕಣ್ಣಾಗಿ ಒಳಗಿಹುದು**
**ರೂಪ–ಲಾವಣ್ಯಕ ಅಳೆಯಲುಬಾರದು**
**ಅವುಗಳೆ ಇದರೊಂದು ಕಣವಿಹದು**
**ಇದಿರಿಗೆ ಚೆಲುವಾಗಿ ಇದುವೆ ತಾನೆನುವಾಗ**
**ಒಲವಾಗಿ ಒಳಗಿಂದ ಹೊಮ್ಮುತಿದೆ**
**ಅಲ್ಲಿತ್ತು ಸ್ವಾನಂದ, ಇಲ್ಲಿದೆ ರಸಗಂಗ**
**ಎಲ್ಲೇನು ಒಂದೆಂದೆ ಚಿಮ್ಮುತಿದೆ.' (ಸಖೀಗೀತ ೪೭೦)**

ಸೌಂದರ್ಯವೆಂದರೇನು? ಅದು ಬಾಹ್ಯ ನೋಟದ ಫಲಿತವೇ.. ಎಂಬ ಪ್ರಶ್ನೆಗಳಿಗೆ ಪೀಠಿಕೆಯಲ್ಲಿ ಚರ್ಚಿಸಲಾಗಿದೆ. ಸೌಂದರ್ಯವೆಂಬುದು ಕಣ್ಣಿಗೂ ಕಣ್ಣಾಗುವ ಅಂತರಂಗದ ಬೆಳಕು. ಜಗತ್ತು ರೂಪ–ಲಾವಣ್ಯದಲ್ಲಿ ವ್ಯಾಪಾರ ಕೇಂದ್ರವಾಗಿರಲು ಕವಿಯ ಈ ವ್ಯಾಖ್ಯಾನವು ಎಲ್ಲರನ್ನೂ ನಾಚಿಸುತ್ತದೆ. ಕಾಣುವ ಚೆಲುವಿಗಿಂತ ಆತ್ಮದ ಒಲವು ನಮ್ಮ ಜೀವದ ಕಣವಾಗಿ ಸ್ಫೂರ್ತಿಗೊಳ್ಳುತ್ತದೆ. ಇಂತಹ ಅಂತರಂಗದ ಬೆಳಕನ್ನು ಕಾಣುವ ಪ್ರತಿಯೊಬ್ಬರಿಗೂ ಸ್ವ–ಆನಂದವು ಲಭಿಸುತ್ತದೆ. ಒಲವಿನ ಹೊತ್ತಿಗೆಯನ್ನೇ ಬರೆದ ಕವಿಯು ಅಂತರಂಗದಿಂದ ಒಲವಿನ ಚೈತನ್ಯವನ್ನು ಸಖ–ಸಖಿ ಭಾವದಲ್ಲಿ ಸೃಷ್ಟಿಸುತ್ತಾರೆ. ನೋವನ್ನು ಅಳಿಸುವುದು ಕವಿಯ ಉದ್ದೇಶವಲ್ಲ, ನೋವನ್ನು ನಲಿವಾಗಿಸುವುದು, ಒಲವಿನ ಚೆಲುವಾಗಿಸುವುದು ಮೂಲ ಉದ್ದೇಶವಾಗಿದೆ. ಬೇಂದ್ರೆ ಅವರ 'ಲಕ್ಷ್ಯ' ಕವಿತೆಯು ತನ್ನ ಕಾವ್ಯ ಸಾರವನ್ನು ಕಿರು ಸಾಲಿನಲ್ಲಿ ಹಿರಿದರ್ಥ ಸಾರಿದೆ. 'ನಗುವಿರಲಿ/ ಅಳುತಿರಲಿ/ ಎರಡನ್ನು ನಂಬೆ./ ನಗೆ ನಂಜು/ ಅಳು ಮಂಜು/ ಇದ್ದೀತು ಎಂಬೆ./ ಮಾತಿರಲಿ/ ಇರದಿರಲಿ/ ಎರಡು ಸಮ ತಾನು/ಇದು

ಮರುಳು/ ಅದು ಹುರುಳು/ ಇರಲಾರದೇನು? ಹೊರಗೊಂದು/ ಒಳಗೊಂದು/ ಲಕ್ಷಣವು ಸಾಕು/ಹಾಗೇನು? ಹೀಗೇನು? ಲಕ್ಷ್ಯವೇ ಬೇಕು.' ಎಂದಿದ್ದಾರೆ. ನಗುವೆಂಬುದು ಕಾಣುವ ನೋಟ. ಅಳುವೆಂಬುದು ಕಾಣದ ಮಾಟ. ಬೇಂದ್ರೆ ಅವರು ಕಾಣುವ ಈ ನೋಟವನ್ನು ನಂಬುವುದು ಸಹಜವಲ್ಲ ಎಂದಿದ್ದಾರೆ. 'ಸೌಂದರ್ಯವೆಂಬುದು ಕಣ್ಣಿನ ತುತ್ತಲ್ಲ' ಎನ್ನುವಾಗಲೇ ಕಣ್ಣಿಗೂ ಕಣ್ಣಾಗಿರುವ ಅಂತರಂಗವನ್ನು ವಿವರಿಸಿದ್ದಾರೆ. ನಾವು ಸೌಂದರ್ಯವನ್ನು ಕಣ್ಣಿನ ನೋಟಕಷ್ಟೇ ಸೀಮಿತಗೊಳಿಸದೆ, ಒಳನೋಟದ ವಿಶಾಲತೆಗೆ ತೆರೆದುಕೊಳ್ಳುವ ಕರ್ತವ್ಯವನ್ನು ಸಾರುತ್ತದೆ. ಆಗ ಮಾತ್ರ ನಾವು ಕಾಣುವ ನೋಟವೆಲ್ಲವೂ ಶುಚಿಯಾಗುತ್ತದೆ. ಅದು ನಿಜವಾದ ವಿಮರ್ಶೆ ಎನಿಸಿಕೊಳ್ಳುತ್ತದೆ.

**ಬೆಟ್ಟಕೊಲಿಯೆ ಮನ ಬೆಟ್ಟದಂತೆ ಬಗೆಹರುಹು ಎತ್ತರಹುದು**
**ಹೊಳೆಗೆ ಒಲಿಯೆ ಮನ ಹೊಳೆಯ ಹಾಗೆ ಬಗೆ ಭಾವ ಹೊಳಿಸುತಿಹುದು॥**
**ಬೆಟ್ಟಹೊಳೆಯ ಬಿಟ್ಟಿರದು ನಿನ್ನ ಬಗೆ ಎಂಥ ಭವ್ಯ ರುಚಿಯು**
**ಕಡಲಿನಂತೆ ಗಂಭೀರಗುಂಭ! ಸೌಂದರ್ಯದಂತೆ ಶುಚಿಯು॥ (ಮೇಘದೂತ– ಪೀಠಿಕೆ)**

ಯಾವುದೇ ಮನಸ್ಸು ತನ್ನ ಸಹೃದಯತೆಯಲ್ಲಿ ಸ್ಪರ್ಷಿಸಿದಾಗ ಸ್ಪರ್ಷದ ತೀಕ್ಷ್ಣತೆಯು ಆ ದಿವ್ಯ ಭವ್ಯತೆಯನ್ನು ಸ್ವೀಕರಿಸುತ್ತದೆ. ವಿಮರ್ಶೆಯ ಮನಸ್ಸೂ ಕೂಡ ಅಂತಹ ಭವ್ಯತೆಯನ್ನು ಕವಿತ್ವದಿಂದ ಪಡೆಯುತ್ತದೆ. ಕುವೆಂಪು ಇದನ್ನು 'ದರ್ಶನ'ವೆಂದಿದ್ದಾರೆ. ಪರುಷ ಮಣಿ ಸೋಂಕಿದ ಅವಸಾನದ ಲೋಹವೂ ರತ್ನದ ಸ್ವರೂಪ ಪಡೆಯುವಂತೆ ವಿಮರ್ಶಕನ ತೀಕ್ಷ್ಣತೆಯ ಫಲಿತ ಭವ್ಯತೆಯಿಂದ ಕೂಡಿರಬೇಕು. ಬೆಟ್ಟಕ್ಕೆ ಒಲಿದ ಮನಸ್ಸು ಅದರೊಂದಿಗೆ ಒಂದಾಗಿ ಅದರ ಆಲೋಚನೆಯೂ, ಭವ್ಯತೆಯೂ ಬೆಟ್ಟದಂತೆ ಎತ್ತರ, ವಿಶಾಲ ಹಾಗೂ ಗಹನತೆಯನ್ನು ಪಡೆಯುತ್ತದೆ. ಇದೇ ಭಾವದಲ್ಲಿ ನದಿಗೆ ಒಲಿದರೆ ನದಿಯ ಜೀವಚೈತನ್ಯವನ್ನು ತಾನೂ ಪಡೆಯುತ್ತದೆ. ನದಿಯ ಜೀವಪೋಷಕ ಗುಣವನ್ನೂ ಪಡೆಯುತ್ತದೆ. ಕವಿತ್ವದ ಶಕ್ತಿಯನ್ನು ಪಡೆಯುವ ವಿಮರ್ಶೆಯು ಕವಿಯ ಭಾವವನ್ನೂ ಮೀರಿ ಸಾಗುತ್ತದೆ. ಒಂದು ನದಿ ಹೇಗೆ ಸಸ್ಯ, ಪ್ರಾಣಿ ಹಾಗೂ ಪ್ರಾಪಂಚಿಕ ಪ್ರಕೃತಿಯೊಂದಿಗೆ ಜೀವ ಚೈತನ್ಯವಾಗುವುದೋ ಹಾಗೆ ಸಮಾಜದೊಂದಿಗೆ ವಿಮರ್ಶಕ. ಸ್ವೀಕರಿಸುವ ಭವ್ಯತೆಯು ಅತ್ಯಂತ ಮಹೋನ್ನತವಾದುದು. ಸೌಂದರ್ಯದಂತೆ ಶುಚಿತ್ವವನ್ನು ಪಡೆದಿರುವ ಜೀವ ಕಾರುಣ್ಯವಿದು.

**ಬೇಟೆಗಾರಿಕೆ ಕಣ್ಗೆ ಮಣ್ ಹೊಯ್ದು ಎಂದಾರೆ**
**ಹಕ್ಕಿಗಳ ಕೇಳಿರುವೆಯಾ?**
**ಬಣ್ಣರೂಪದ ಮಾಲೆ ಬದಿಗಿರಿಸಿ ನರುಗಂಪ**
**ಹಾಡನ್ನು ಹೇಳಿರುವೆಯಾ? (ಅ–ಸ್ಮಿ–ತಾ: ಸೂರ್ಯಪಾನ)**

ಬೇಂದ್ರೆ ಅವರು **ಚತುರ್ಮುಖ ಸೌಂದರ್ಯ**ವನ್ನು ಕನ್ನಡ ಸಾಹಿತ್ಯದಲ್ಲಿ ವಿಶಾಲವಾಗಿ ಅರ್ಥೈಸಿದ್ದಾರೆ. ಅವರ ಕಾವ್ಯವೆಲ್ಲವೂ ಔದುಂಬರ ಗಾಥೆಯಾದರೆ, ಅದರ ಸ್ವರೂಪವು ಚತುರ್ಮುಖ ಸೌಂದರ್ಯದ ನಿಹಿತದಲ್ಲಿದೆ. sensuous beauty ಐಂದ್ರಿಯಿಕ ಸೌಂದರ್ಯ, imaginative beauty ಕಾಲ್ಪನಿಕ ಸೌಂದರ್ಯ, intellectual beauty ಬೌದ್ಧಿಕ ಸೌಂದರ್ಯ, ideal beauty ಆದರ್ಶ ಸೌಂದರ್ಯ ಈ ನಾಲ್ಕು ಬಗೆಯ ಸೌಂದರ್ಯ ಸಿದ್ಧಾಂತವನ್ನು ಬೇಂದ್ರೆ ಕವಿತೆಗಳನ್ನು ಸರಳವಾಗಿ ತಿಳಿಯಲು ಬಳಸಬಹುದು. ಪ್ರಕೃತಿಯ ದರ್ಶನವನ್ನು ಈ ಕಣ್ಣಿನಿಂದ ಸವಿಯಬೇಕು. ಹಕ್ಕಿಯ ಕಣ್ಣು ಎಂಬುದೇ ಅತಿ ಸೂಕ್ಷ್ಮತೆಯನ್ನೂ, ಆಳವನ್ನೂ ಸೂಚಿಸುವಂತಹದು. ಅಂತಹ ದಿಗ್ದಿಗಂತತೆಯು ನಮ್ಮ ಅಂತರಾಳವನ್ನು ದರ್ಶಿಸಿರಬೇಕು. ಆಗ ಮಾತ್ರ ಕತ್ತಲಲ್ಲೂ ಬೆಳಕಿನ ಸವಿಯನ್ನು ಕುಡಿಯಬಹುದು. ಒಬ್ಬ ವಿಮರ್ಶಕನು ಒಂದು ಹಕ್ಕಿಯ ಆಂತರ್ಯದ ಸವಿರಾಗದಂತೆ ತನ್ನ ದರ್ಶನವನ್ನು ಸೂಚಿಸಬಲ್ಲ. ಕವಿಯ ಕಲ್ಪನೆಯನ್ನೂ ಮೀರಿಯೊ ಅಥವಾ ವಿಶಿಷ್ಟವಾದ ಬೇರೆ ಅರ್ಥಗಳನ್ನು ನಿರೂಪಿಸಿಯಾದರೂ ಅರ್ಥೈಸಬಲ್ಲನು. ಓದುವ ಸಹೃದಯನಿಗೆ ಹೊಸಮಾದರಿಗಳಲ್ಲಿ ವಿಮರ್ಶಕನು ಕವಿತ್ವವನ್ನು ಪರಿಚಯಿಸುತ್ತಾನೆ. ಆದ್ದರಿಂದ ಕವಿಯ ಜವಾಬ್ದಾರಿಯು ವೈಯಕ್ತಿಕವಾದರೆ, ವಿಮರ್ಶಕನದು ಸಾಮೂಹಿಕ ಜವಾಬ್ದಾರಿಯಾಗಿರುತ್ತದೆ.

**ನಾದ ಬೇಕು ನಾದ ಬೇಕು**
**ನಾದಾನ ನಾದ ಬೇಕು**
**ನಾದಕ್ಕೆ ಪ್ರತಿನಾದ ಬೇಕು**
**ನಾದಾನ್ಹಾನ ಆದ ಮ್ಯಾಲೆ ಬ್ಯಾರೆ ಯಾಕ ವಾದ ಬೇಕು? (ನಾದ ಬೇಕು: ಜೀವಲಹರಿ)**

ಇಲ್ಲಿ ನಾದವೆಂದರೇನು? ಎಂಬ ಪ್ರಶ್ನೆಯನ್ನು ನಾನು ವಿಶೇಷವಾಗಿ ಸ್ವೀಕರಿಸುತ್ತೇನೆ. ನಾದವೆಂದರೆ ಕಾವ್ಯದ ಫಲಿತ. ಈ ನಾದಕ್ಕಾಗಿ ಸಹೃದಯ ಸದಾ ಹಂಬಲಿಸುತ್ತಾನೆ. ಕವಿ ತನ್ನ ಆಂತರ್ಯದ ದನಿಯನ್ನು ಕವಿತ್ವದಲ್ಲಿ ಸೃಷ್ಟಿಸುತ್ತಾನೆ. ಆದರೆ ಸಹೃದಯರಿಗೆ ಈ ಹಾಡಿನ ನಾದವನ್ನು ಸ್ವೀಕರಿಸಲು ವಿಮರ್ಶಕನೆಂಬ ಸರಿಯಾದ ಹಾಡುಗಾರ ಬೇಕು. ಅವನೂ ಸಾಮಾನ್ಯ ಓದುಗನೂ ಆಗಬಹುದು. ಕವಿತ್ವದ ನಾದವನ್ನು ಸರಿಯಾಗಿ ಹಿಟ್ಟು ನಾದಿದಂತೆ ನಾದಿದರೆ(ಹದಗೊಳಿಸಿದರೆ) ಹೊಸ ತತ್ವ ಮೂಡುತ್ತದೆ. ಇಂತಹ ನಾದವು ಹೊರಹೊಮ್ಮಿಸುವ ಜವಾಬ್ದಾರಿಯು ವಿಮರ್ಶಕನದು. ಆದ್ದರಿಂದ ಪ್ರತಿಯಾದ ನಾದ ಸೇರಬೇಕೆ ಹೊರೆತು ವಾದದ ಅಗತ್ಯವಿಲ್ಲ. ತರ್ಕವು ಪ್ರತಿನಾದವಾಗದೇ, ಒಣ ಹರಟೆಯೋ, ಬರಿ ಟೀಕೆಯೋ ಆದರೆ ನಾದವು ಧ್ವನಿಸುವುದಿಲ್ಲ. ಇಲ್ಲಿ ವಿಮರ್ಶಕನ ಕಾರ್ಯ ಬಹಳ ದೊಡ್ಡದು.

**ಇರವು ಅರಿವಿನೊಳು ಹರವಿಕೊಳ್ಳುತಿದೆ**

**ಹಿಗ್ಗಿನೊಂದು ಬಟ್ಟೆ**
**ಬೀಜ ಮೊಳೆತು ಹೂತಿರಲು ಕಂಪು**
**ಅದು ಏನು ಕಣ್ಣು–ಕಟ್ಟೆ? (ಬೆಳಗಬೇಕು – ಉತ್ತರಾಯಣ)**

ಪ್ರಕೃತಿಯ ಸಹಜತೆಯಂತೆ ಕವಿಯ ಕವಿತ್ವವಾಗಿರುತ್ತದೆ. ಈ ಪ್ರಕೃತಿಯೊಂದಿಗೆ ಅನುಸಂದಾನಗೊಳ್ಳುವ ಸಂಸ್ಕೃತಿಯು ವಿಮರ್ಶಕನ ದಾರಿಯಾಗಿರುತ್ತದೆ. ಇಲ್ಲಿ ಕವಿತ್ವದ 'ಇರವು' ತುಂಬಾ ಮುಖ್ಯವಾದುದು. ಅದರೊಂದಿಗಿನ ಅರಿವು ಹಾಗೂ ಅದನ್ನು ಸ್ವೀಕರಿಸುವ ಹಿಗ್ಗುವಿನ(ಆನಂದ) ದಾರಿ ವಿಶೇಷವಾದುದು. ಮಣ್ಣಿನಲ್ಲಿ ಸೇರಿದ ಬೀಜ ಅರ್ಥಪೂರ್ಣವಿದ್ದರೆ ಮೊಳಕೆ ಬಂದೇ ಬರುತ್ತದೆ. ಅದರ ಆ ಜೀವ ಚೈತನ್ಯವನ್ನು ಸವಿಯುವ ಪ್ರಕೃತಿಯು ನಾವಾಗಬೇಕು. ಅಂತಹ ನೋಟವು ನಮಗೆ ಬೇಕು. ಅಲ್ಲಿ ಸ್ಥಿರತೆಯಿರದೆ, ಸಂಚಲನವಿರುವುದು ಮುಖ್ಯ.

**ಮುಚ್ಚಿಡುವದೇಕಿನ್ನು, ಬಚ್ಚಿಡುವದಿನ್ನೆಲ್ಲಿ,**
**ಮುಚ್ಚುಮರೆ ಮಾಳ್ಪುದಕೆ ಮುಸುಕು ಇಹುದೆಲ್ಲಿ?**
**ನೆಚ್ಚುಮೆಚ್ಚುಗಳನ್ನು ಬಿಚ್ಚು ಜೀವದೊಳೊತ್ತಿ**
**ಹೊಚ್ಚಿ ಪ್ರೀತಿಯ ಸೆರಗ ಎತ್ತಿಕೋ ಎನ್ನ. (ಅಭಯ ಯಾಚನೆ – ಗರಿ)**

ಕವಿತ್ವದೊಳಗೆ ಇರುವದನ್ನು ಯಾವುದೇ ವಿಮರ್ಶಕ(ವಿಮರ್ಶಕನೆಂಬ ಪದವನ್ನು ಮತ್ತೆ ಮತ್ತೆ ಬಳಸುವಾಗ ಯಾವುದೇ ಲಿಂಗ ಸೂಚ್ಯವನ್ನು ಹೊಂದಿಸದೇ, ಎಲ್ಲರಿಗೂ ಹೊಂದುವ ಪರಿಕಲ್ಪನೆಯಾಗಿ ಬಳಸುವುದು) ಮುಚ್ಚಿಡಲು ಸಾಧ್ಯವಿಲ್ಲ. ಕಾವ್ಯದ ಸೌಂದರ್ಯವು ಒಬ್ಬರಲ್ಲದಿದ್ದರೂ ಇನ್ನೊಬ್ಬರಿಂದ ಪ್ರಕಟಗೊಳ್ಳುತ್ತದೆ. ಈ ಬಚ್ಚಿಡುವ ಕುಶಲತೆಯು ಜ್ಞಾನದಲ್ಲಿ ಸಲ್ಲದು. ಇಷ್ಟಗಳನ್ನೂ, ವಿರೋಧಗಳನ್ನೂ ಸ್ವೀಕರಿಸಿ ಪ್ರೀತಿಯನ್ನು ತುಂಬುವ ಮೂಲಕ ಕಾವ್ಯವನ್ನು ವಿಮರ್ಶಕ ಸ್ವೀಕರಿಸಬೇಕು. ಈ ಸ್ವೀಕಾರದ ವಿಮರ್ಶೆಯು ಎಲ್ಲಾ ಅಕ್ಷರಗಳಿಗೂ ಮರು ರಚನೆಯನ್ನು ತುಂಬುತ್ತಾ ಜೀವ ಚೈತನ್ಯವಾಗುತ್ತದೆ.

**ಕೂಡಿ ಓದಿ, ಕೂಡಾಡಿ, ಕೂಡಿ**
**ಅರಿಯೋಣ ಕೂಡಿ ಕೂಡಿ**
**ಕೂಡಿ ತಿಂದು, ಕೂಡುಂಡು ಕುಡಿದು**
**ದುಡಿಯೋಣ ಕೂಡಿ ಕೂಡಿ (ಭರತವಾಕ್ಯ – ಗಂಗಾವತರಣ)**

ಈ ಮೂರು ಕವಿತೆಗಳು ಅಧ್ಯಯನದ ಮೈಲಿಗೆಯನ್ನು ತೊಳೆದು, ವಿಮರ್ಶಕನೆಂಬ ಕಿರೀಟವನ್ನು ಕಳಚಿ, ಸಹೃದಯನಿಗೆ 'ಸಹಜ ಚಿಂತಕ' ಪಟ್ಟವನ್ನು ನೀಡುತ್ತಿದ್ದಾರೆ ಬೇಂದ್ರೆ ಅವರು. ಮೂಲತಃ ಜನಪದ ಪ್ರಪಂಚದಲ್ಲಿ ತನ್ನ ಕವಿತ್ವವನ್ನು ಸಾಣೆಗೊಳಸಿದ ಕವಿಗೆ, ಓದುಗನ ಹೃದಯವನ್ನು ಹದಮಾಡುವ ಕುಶಲತೆಯು ಚೆನ್ನಾಗಿ

ತಿಳಿದಿದೆ. ಓದುವಿಕೆ ಎಂಬುದು ಏಕಾಂತ ಸ್ವರೂಪದಲ್ಲಿ ಸೃಷ್ಟಿಗೊಂಡರೂ, ಸಮೂಹದಲ್ಲಿ ಧ್ವನಿಸುವ ಶಬ್ದ ತತ್ವವು ಅರ್ಥಪ್ರಪಂಚದ ಅನಾವರಣವು ವಿಶೇಷವಾದುದು. ಕವಿಯು ಇದನ್ನು 'ಕೂಡಿ ಓದುವುದು' ಎನ್ನುವರು. ಈ ಕೂಡಿ ಓದುವ ಕಲೆಯಲ್ಲಿ ಜೀವನ ತುಂಬಿದ್ದಾರೆ ಕವಿ. ಕೂಡಿ ಓದುವಂತೆಯೇ ಸಮೂಹದ ಹೊಂದಾಣಿಕೆಯಲ್ಲಿ ಜೀವನದ ಎಲ್ಲಾ ಹಂತಗಳು ಬರುತ್ತವೆ. ಊಟ, ಆಟ, ದುಡಿಮೆ ಈ ಎಲ್ಲವನ್ನೂ ಸ್ವಾರಸ್ಯದಲ್ಲಿ ಸ್ವೀಕರಿಸಲು ನಮ್ಮೊಳಗೆ ಒಂದು ಭರತವಾಕ್ಯವೇ ಮೂಡಬೇಕಿರುತ್ತದೆ.

**ಬೆಳಕೋ ಇತ್ತಲು, ಆಚೆಗೆ ಕತ್ತಲು**
**ಬೆಸುಗೆಗೆ ರಕ್ತವು ಉಕ್ಕುತಿದೆ**
**ಸ್ನೇಹದ ಧಾರೆಗೆ–ಭಾವದ ಮೇರೆಗೆ**
**ಬೆಂಕಿಯ ನಾಲಗೆ ನೆಕ್ಕುತಿದೆ (ಅನಸೂಯೆಯ ಕನಸು – ಸಂಚಯ)**

ಬೇಂದ್ರೆಯ ಕವಿತ್ವಕ್ಕೆ ಸೂಕ್ತ ಕಾರಣಗಳಿರಬಹುದು. ಆದರೆ ಈ ಕಾವ್ಯದ ಶುಚಿಯನ್ನು ಕಾಣುವಾಗ ಕಾರಣವನ್ನೂ, ಕಥೆಗಳ ಹಂದರವನ್ನೂ ಮೀರಿ ಸವಿಯುವ ಶಕ್ತಿಯು ಸಹೃದಯನದು. ಬೇಂದ್ರೆಯವರ ಭಾವಗೀತ ಕವಿತೆಯನ್ನು ವಿಮರ್ಶಿಸುತ್ತಾ ಜಿ. ಕೃಷ್ಣಪ್ಪ ಅವರು "ಹೀಗೆ ಉನ್ಮುಖವಾಗಿ ಕವಿ ಪ್ರತಿಭೆ ಸಾಗಿದರೂ ಅದರ ಸಹಜ ಸುಖ ನೆಲದ್ದು. ಇಲ್ಲಿಯ ಮೋಹಾ. ಸೌಂದರ್ಯ, ಬೆಡಗಿನ ಸೆಳೆತದಲ್ಲಿಯೂ ಅಮರತ್ವವಿದೆ." ಎಂದು ಕಾವ್ಯತತ್ವವು ಅಮರತ್ವವಾಗುವ ಪರಿಯನ್ನು ಸೂಚಿಸಿದ್ದಾರೆ. ಈ ಕತ್ತಲು–ಬೆಳಕು ಎಂಬ ಎರಡು ಕಾರಣಗಳನ್ನು ಬೆಸೆಯಲು ಜೀವವೆಂಬ ರಕ್ತ ಸಂಚಾರವು ಸದಾ ತುಡಿಯುತ್ತಿರುತ್ತದೆ. ಈ ಪ್ರಕೃತಿಯೊಂದಿಗೆ ತನ್ನ ಸ್ಥಾಯಿ ಶುಚಿತ್ವವನ್ನು ಕಂಡುಕೊಳ್ಳಲು ಸ್ನೇಹ, ಭಾವಗಳೆಂಬ ವಿಶಿಷ್ಟ ಧಾರೆಗಳನ್ನು ಅಪೋಶನ ಅಥವಾ ಕಠಿಣ ಪರಿಶ್ರಮದ ಮಾದರಿಯಲ್ಲಿ ಸ್ವೀಕಾರವಾಗುತ್ತಿರುವುದು ವಿಶಿಷ್ಟವಾದುದು. ಕವಿಯ ಕಾವ್ಯದೊಂದಿಗಿನ ವಿಮರ್ಶಕನ ಯಾತ್ರೆಯೂ ಇದೇ ಮಾದರಿಯದು. ಕವಿ ಹಾಗೂ ಸಹೃದಯನೊಂದಿಗೆ ಬೆಸೆಯುವ ಜೀವ ಚೈತನ್ಯವು ವಿಮರ್ಶೆಯೆಂಬ ತತ್ವದೊಳಗೆ ಅಡಗಿರುತ್ತದೆ. ಈ ಯಾತ್ರೆಯಲ್ಲಿಯೇ ಸಂಶೋಧನೆ ಎಂಬ ಗಂಭೀರವಾದ ವ್ಯವಸಾಯವು ಸದಾ ನಿರಂತರವಾಗಿ ನಡೆಯುತ್ತಿರುತ್ತದೆ.

**ನಿಲ್ಲುವುದು ಗತಿಯಲ್ಲ ಅತಿಗತಿಗೆ, ಉದ್ಗತಿಗೆ**
**ನಿಲುವು ಬರುವುದು ಸಹಜ, ವಿಗತಿ ಪ್ರಗತಿಯ ಕೂಟ–**
**ದಲ್ಲಿ ತಲೆದೋರುವುದು ಸಂಗತಿಯ ಸಾಂಗತ್ಯ.**
**ಸೌಜನ್ಯಜನ್ಯ ಸೌಂದರ್ಯದರ್ಶನ ಸತ್ಯ. (ನಿಲ್ಲುವುದು ಗತಿಯಲ್ಲ: ಸಂಚಯ)**

ಸದಾ ಚಲನಶೀಲವಾದ ಸಾಹಿತ್ಯದ ತಾತ್ವಿಕತೆಯು ವಿಮರ್ಶೆಯೆಂಬ ಕೊಂಡಿಯನ್ನು ತನ್ನ ಲಕ್ಷಣ ಸ್ವರೂಪದಲ್ಲಿ ಪಡೆಯುತ್ತಾ ಸಾಗುತ್ತದೆ. ಯಾವುದೇ ತಾತ್ವಿಕತೆಯು ಉನ್ನತವಾದ ನಿಲುವನ್ನು ಪಡೆಯುವುದು

ಸಹಜ. ಆದರೆ ಅಲ್ಲಿಗೆ ನಿಲ್ಲುವುದು ಉಚಿತವಲ್ಲ. ಇಪ್ಪತ್ತೊಂದನೆಯ ಶತಮಾನದಲ್ಲಿ ತನ್ನ ಹಿಂದಿನ ಸಾಹಿತ್ಯವು ಕೇವಲ ಪಠ್ಯಗಳಿಗೆ, ಭಾಷಣಗಳಿಗೆ, ಗೌರವಗಳಗೆ ಸೀಮಿತವಾಗುತ್ತಾ ತನ್ನ ಗತಿಯ ನಿಲ್ಲುವಿಕೆಯೇ ಪ್ರಾರಂಭವಾಗುತ್ತಿತ್ತು. ತಂತ್ರಜ್ಞಾನದ ಮಹಾ ಸಂಗ್ರಾಮದಲ್ಲಿ ಮತ್ತೆ ಜನಸಾಮಾನ್ಯರೂ ತನ್ನ ಹಿಂದಿನ ಶತಮಾನಗಳ ಸಾಹಿತ್ಯವನ್ನು ಸರಳೀಕರಿಸಿ ಸವಿಯುತ್ತಿರುವುದು ಹರ್ಷನೀಯ. ಇದುವೆ ಸಹಜ ಗತಿ. ಯಾವುದೇ ಸಾಹಿತ್ಯವು ತನ್ನ ಸತ್ವವನ್ನು ದರ್ಶನಮಾಡಬೇಕಾದರೆ ಅದರ ನಿಲುವು ಸಹಜವಾಗಿಯೇ ಚಲನಶೀಲತೆಯನ್ನು ಪಡೆದಿರಬೇಕು. ಇಂತಹ ಚಲನೆಯನ್ನು ತುಂಬುವ ಶಕ್ತಿಯು ವಿಮರ್ಶಕನ ತತ್ವವನ್ನು ಅವಲಂಬಿಸಿರುತ್ತದೆ. ಅಕ್ಷರಗಳ ಚೆಲ್ಲಾಟವನ್ನೂ ಕೂಡ ವಿಮರ್ಶಕನು ಇದೊಂದು ಕುಕವಿಯ ಕಾರ್ಯವೆಂದು ಸಹಜವಾಗಿ ಗುರ್ತಿಸಬಲ್ಲ. ವಿಮರ್ಶಕನೆಂದರೆ ವೈದ್ಯನಿದ್ದಂತೆ ಕವಿಯೆಂಬ ಪ್ರಕೃತಿಯ ಯಾವುದೇ ತಲ್ಲಣಗಳಿಗೆ ಸರಿಯಾದ ಚಿಕಿತ್ಸೆ ನೀಡಿ ಪ್ರಕೃತಿಯ ಮೂಲಕ ಆರೋಗ್ಯ ಲಭಿಸಲು ಸಹಕಾರಿಯಾಗುತ್ತಾನೆ.

**ಕಾಣುವುದು ಒಂದು, ನೋಡುವುದು ಒಂದು**
**ಇದು ಅರಿವು ಮರೆವಿನಾಟ.**
**ಕಾಣ್ಕೆ ನೋಟಗಳ ಕೂಟದಲ್ಲಿಯೇ**
**ಬಿನ್ನಾಣದೊಂದು ಬೇಟ (ಅರಿವು–ಮರೆವು: ಪ್ರತಿಬಿಂಬಗಳು)**

ಈ ಕಾರಣದಿಂದಲೇ ಕವಿಯು ವಿಮರ್ಶೆಯನ್ನು 'ಕಾಣಿಸುವಿಕೆ'ಯಾಗಿ ತೆರೆದಿಡುತ್ತಾರೆ. ಸಹೃದಯನ ಅರಿವಿನ ಶಕ್ತಿಯನ್ನು ಕಾಣಿಸಲು ಕಾಣುವಿಕೆಯು ಬರಿ ನೋಟವಾಗಿ ನಿಲ್ಲಬಾರದು. ಕವಿಯ ಕಾಣ್ಕೆಯು ಒಂದಾದರೆ ನೋಡುವ ನೋಟವು ಮತ್ತೊಂದಾಗಿ ಕವಿತೆಯು ಅರಿವಿನ ಮರೆವಿನಾಟದಲ್ಲಿ ಸಿಲುಕಿ ಮರೆಯಾಗುತ್ತದೆ. ಆದರೆ ಕಾಣಿಸುವಿಕೆಯ ಸರಿಯಾದ ಕ್ರಮವು ಸಹೃದಯನಿಗೆ ದಕ್ಕಿದರೆ ಕಾಣ್ಕೆಗಳ ಕೂಟದಲ್ಲಿ ಹೊಸ ಬಿನ್ನಾಣದ ಮೋಹವೂ, ಆಕರ್ಷಣೆಯೂ ಸಹೃದಯನಲ್ಲಿ ನೆಲೆಯೂರುತ್ತದೆ. ಕವಿತೆ ಮತ್ತೆ ಮತ್ತೆ ಹೊಸ ಅರ್ಥಗಳ ಓದಿನ ಜಾಡನ್ನು ತಲುಪುತ್ತದೆ.

**ನಿಜವ ಕಂಡವರಿಲ್ಲ**
**ನಿಜ ಕಾಣುವಂತಿಲ್ಲ**
**ನಿಜವೇನು ಮಳಲ ಹುಡಿಗಿಂತ ಕೀಳೇ?**
**ನಿಜವ ಕಂಡಿಹೆನೆಂಬ**
**ಕಣ್ಣಜಂಭದ ಹುಂಬ!**
**ಮಳಲ ಹುಡಿ ಗುಟ್ಟೇನು ಕಣ್ಣ ಕೂಳೇ? (ಅಚಿಂತ್ಯ– ಮೂರ್ತಿ)**

ಆದರೆ ಕವಿಯ ಕಾಣ್ಕೆಯನ್ನು 'ಕಾಣಿಸುವಿಕೆ'ಯ ಕಾರ್ಯದಲ್ಲೂ ಸತ್ಯದ ದರ್ಶನವನ್ನು ಸಹೃದಯ ಪಡೆಯುತ್ತಾನೆಯೇ ಎಂದರೆ ಅದು ಸಾಧ್ಯವೆಂದು ಹೇಳಲಾಗದು. ಕವಿಯ ಸತ್ಯವನ್ನು ತನ್ನ ಸತ್ಯದ ಜೊತೆಯಲ್ಲಿ ತೌಲನಿಕ ದರ್ಶನವಾಗಿಸಬಹುದೇ ಹೊರೆತು, ಕವಿತ್ವದ ನಿಜ ತಿಳಿಯಲಾಗದು. ಆದ್ದರಿಂದಲೇ ಎಲ್ಲಾ ಸಂಶೋಧನೆಗಳೂ ಕೂಡ ಅಪೂರ್ಣ ಕಾರ್ಯಗಳು. ಇನ್ನೂ ಈ ಜಗತ್ತು ಹೊಸ ಅನ್ವೇಷಣೆಗಳನ್ನು ಸೃಷ್ಟಿಸುತ್ತಾ ಸಾಗಬಹುದು. ಆದ್ದರಿಂದಲೇ ಪಂಪ–ರನ್ನ–ಪೊನ್ನ–ಜನ್ನರ ಕಾವ್ಯಗಳು, ವಚನಾದಿ ವೇದಗಳು, ಕುಮಾರವ್ಯಾಸಾದಿ ತತ್ವಸೂಕ್ತಿಗಳು ಇನ್ನೂ ಹೊಸ ತಾತ್ವಿಕತೆಯ ದರ್ಶನಕ್ಕೆ ಮತ್ತೆ ಮತ್ತೆ ಒಳಗಾಗುತ್ತಿವೆ. 'ನಿಜವೇನು ಮಳಲ ಹುಡಿಗಿಂತ ಕೀಳೇ? ನಿಜವ ಕಂಡಿಹೆನೆಂಬ ಕಣ್ಣಜಂಭದ ಹುಂಬ! ಮಳಲ ಹುಡಿ ಗುಟ್ಟೇನು ಕಣ್ಣ ಕೂಳೇ?' ಎಂದು ಬೇಂದ್ರೆ ಮಳಲ ಹುಡಿಗಿಂತಲೂ ಕಿರು ವಿಶ್ವ ಸಂಜಾತ ಶಕ್ತಿಯನ್ನು ಕಾವ್ಯಕ್ರಿಯೆಗೆ ತುಂಬಿದ್ದಾರೆ. ಇದರ ಗುಟ್ಟನ್ನು ಕಣ್ಣಿನ ಬೆಳಕಲ್ಲಿ(ಅಂತರಂಗದ ಅರಿವು) ಸೆರೆಯಿಡಿಯಲು ಅಂದರೆ ಸತ್ಯವನ್ನು ತಿಳಿಯಲು ಸಾಧ್ಯವಿಲ್ಲ. ಎಂದಿದ್ದಾರೆ. ಈ ದೃಷ್ಟಿಯಿಂದಲೇ ಕಾವ್ಯವನ್ನು ಅನಂತ ಶಕ್ತಿಯ ಸತ್ಯ ಎಂದು ಕರೆಯಬಹುದು. ಕವಿಯನ್ನು 'ಬ್ರಹ್ಮ ಸ್ವರೂಪಿ' ಎಂದು ತೀರ್ಮಾನಿಸಬಹುದು. ಇವುಗಳನ್ನು ನಮಗೆ ಧಾರೆಯೆರೆಯುವ ವಿಮರ್ಶಕನು 'ಗಾರುಡಿಗ'ನಿದ್ದಂತೆ. ಸಮಾಜದ ನಿತ್ಯಸುಖ–ದುಖಃಗಳಿಗೆ ಕಾವ್ಯಾಮೃತದ ಹಣಿಸು ಅಗತ್ಯವಿದೆ. ಬೇಂದ್ರೆ ಅವರು ಇದನ್ನೇ ತಾತ್ವಿಕಗೊಳಿಸಿ ಈ ರೀತಿಯಲ್ಲಿ ತಿಳಿಸಿದ್ದಾರೆ. **"ಕಾವ್ಯ ಅಮೃತಕ್ಕೆ ಹಾರುವ ಗರುಡ; ಅವನ ಗರುಡಿಯಲ್ಲಿ ನವೋನವ ಗಾರುಡ ಮಂತ್ರ ಒಡಮೂಡಬೇಕು. ಅವನ ಗರಿಯಲ್ಲಿಯೂ ಶರಣಾಗುವ ಶರಭಾವ ಇರುವದು."** ಅಂತಹ ಶಕ್ತಿ ಕವಿಯದಾಗಲಿ, ಅದನ್ನು ಅರಿಯುವ ಕಲೆಯು ವಿಮರ್ಶಕನಿಗೆ ಲಭಿಸಲಿ. ವಿಮರ್ಶೆಗೆ, ವಿಮರ್ಶಕನಿಗೆ ಹೊಸ ಅರ್ಥಗಳು ಧ್ವನಿಸಲಿ.

**ಸಂಶೋಧನೆಗೆ ವಿವಿಧ ದಾರಿಗಳು:**

- ವಿಮರ್ಶೆ ಎಂಬುದು ಸಂಶೋಧನೆಯ ಸ್ವರೂಪದಾಚೆಗೆ ನಿಂತು ಪ್ರತ್ಯೇಕವಾಗುವುದಕ್ಕಿಂತ ಸಂಶೋಧನೆಯ ಪೂರ್ಣಭಾಗವಾಗುವುದು ಮುಖ್ಯ ಎನಿಸುತ್ತದೆ. ಸಂಶೋಧನೆಯೊಳಗೆ ವಿಮರ್ಶೆ ಇರುತ್ತದೆ. ಆದರೆ ವಿಮರ್ಶಾ ಲೇಖನಗಳು ಸಂಶೋಧನಾ ಸ್ವರೂಪವನ್ನು ತಂದುಕೊಳ್ಳಬೇಕಿದೆ.
- ಕನ್ನಡ ಸಾಹಿತ್ಯದಲ್ಲಿ ಹೆಚ್ಚಾಗಿ 20ನೇ ಶತಮಾನದ ವಿಮರ್ಶೆಗಳೇ ಮುಖ್ಯ ಆಕರಗಳಾಗಿವೆ. 21ನೇ ಶತಮಾನದ ಈ ಕಾಲಘಟ್ಟವು ಕನ್ನಡ ಸಾಹಿತ್ಯದ ಓದುವಿನಲ್ಲಿ 'ವಿಮರ್ಶಾ ಮಾದರಿ'ಯ ಕೊರತೆ ಹೆಚ್ಚು ಇದೆ. ಇದರಲ್ಲಿ ಗಂಭೀರತೆಯೂ ಬರಬೇಕಿದೆ.

- ವಿಮರ್ಶೆ ಎಂಬ ಪರಿಕಲ್ಪನೆಯನ್ನು ಪಾಶ್ಚಾತ್ಯ ಸಾಹಿತ್ಯದ ಓದುವಿನ ಕಣ್ಣಿನಿಂದಲೇ ನಿರ್ಧರಿಸುವುದು ಸೂಕ್ತವಲ್ಲ. ದೇಶಿಯ ಅದರಲ್ಲೂ ಸಹಜವಾದ ಜನಸಾಮಾನ್ಯ ಓದುವಿನ ಹೊಸ ಅರ್ಥವನ್ನು ಧ್ವನಿಸಬೇಕಿದೆ. ಈ ದಿಕ್ಕಿನಲ್ಲಿ ಸಂಶೋಧನೆಗಳ ಕೊರತೆಯಿದೆ.
- ವಿಮರ್ಶೆಗಳ ಕುರಿತು ಸಂಶೋಧನೆಗಳು ಹೆಚ್ಚು ಬರಬೇಕಾಗಿದೆ. ವಿಮರ್ಶಾ ಕ್ಷೇತ್ರದ ಮರು ಮೌಲ್ಯಮಾಪನವೇ ನಮ್ಮ ಇಂದಿನ ಬಹುದೊಡ್ಡ ಜವಾಬ್ದಾರಿಯಾಗಿದೆ.

ಒಟ್ಟಾರೆ ವಿಮರ್ಶೆ ಎನ್ನುವ ಕಾರ್ಯವು ಸಾಹಿತ್ಯವನ್ನು ಶುಚಿಗೊಳಿಸುವ ಸ್ವರೂಪಿ ಸಾಧನ. ಸಹೃದಯನ ಅಂತರಂಗದಿಂದ ಸೃಷ್ಟಿಗೊಳ್ಳುವ ಸಹಜತೆಯೇ ಸಾಹಿತ್ಯ ಸೃಷ್ಟಿಯನ್ನು ಹೊಸಮಾದರಿಯಲ್ಲಿ ಪರಿಶೀಲಿಸಬೇಕಿದೆ. ಓದು ಆನಂದದ ತಿರುಳು. ಈ ಆನಂದವನ್ನು ಹಲವರಿಗೆ ಹಂಚಿದಾಗ ಮಾತ್ರ ಅರ್ಥಪೂರ್ಣವಾಗುವುದು. ಸಾಹಿತ್ಯ ಸಾರ್ಥಕಗೊಳ್ಳುವುದು. ಹಲವು ಆಯಾಮಗಳನ್ನು ಕೇಂದ್ರೀಕರಿಸಿದ ದ. ರಾ ಬೇಂದ್ರೆ ಅವರ ಕೃತಿ ‘ನಾದಲೀಲೆ’ಯ ಮೊದಲ ನುಡಿಯೊಂದಿಗೆ ಈ ಲೇಖನವನ್ನು ಪೂರ್ಣಗೊಳಿಸಬಹುದು.

**“ಎನ್ನ ಪಾಡೆನಗಿರಲಿ ಅದರ ಹಾಡನ್ನಷ್ಟೆ<br>ನೀಡುವೆನು ರಸಿಕ! ನಿನಗೆ!<br>ಕಲ್ಲು ಸಕ್ಕರೆಯಂಥ ನಿನ್ನೆದೆಯು ಕರಗಿದರೆ<br>ಆ ಸವಿಯ ಹಣಿಸು ನನಗೆ!”**

-------

*ಆಕರ ಗ್ರಂಥಗಳು:*

೧. ಗೋಪಾಲಕೃಷ್ಣ ಅಡಿಗ(ಸಂ)., ಸಾಕ್ಷಿ–೭., ೧೯೬೯–೭೦., ಅಕ್ಷರ ಪ್ರಕಾಶನ, ಸಾಗರ, ಮೈಸೂರು ರಾಜ್ಯ, ಪುಟ ಸಂಖ್ಯೆ ೧೧೬

೨. ಆಂಡಯ್ಯ., ಕಬ್ಬಿಗರ ಕಾವ., ಆರ್.ವಿ. ಕುಲಕರ್ಣಿ(ಅನು)., ೨೦೦೪., ೨೦೧೫., ಸಾಹಿತ್ಯ ಪರಿಷತ್ತು, ಬೆಂಗಳೂರು., ಪುಟ ಸಂಖ್ಯೆ ೫

3. ಗೋಪಾಲಕೃಷ್ಣ ಅಡಿಗ(ಸಂ)., ಸಾಕ್ಷಿ–೧., ೧೯೬೯–೭೦., ಸಾಕ್ಷಿ ಪ್ರಕಾಶನ, ಮೈಸೂರು–೧., ಪುಟ ಸಂಖ್ಯೆ

**ಪರಾಮರ್ಶನ ಗ್ರಂಥಗಳು**

೧. ವಾಮನ ಬೇಂದ್ರೆ(ಸಂ), ಅಂಬಿಕಾತನಯದತ್ತರ ಸಮಗ್ರ ಕಾವ್ಯ, ಸಂಪುಟ ೧,೨,೩,೪,೫,೬., (೨೦೦೩,೨೦೧೬) ವರಕವಿ ಡಾ॥ ದ.ರಾ ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳಿ.

೨. ವಾಮನ ಬೇಂದ್ರೆ(ಸಂ), ಅಂಬಿಕಾತನಯದತ್ತರ ಕಾವ್ಯೋದ್ಯೋಗ ಸಿದ್ದಾಂತ ಸಂಪುಟ ೧೨., (೨೦೦೯) ವರಕವಿ ಡಾ॥ ದ.ರಾ ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳಿ.

೩. ವಾಮನ ಬೇಂದ್ರೆ(ಸಂ), ಅಂಬಿಕಾತನಯದತ್ತರ ಸಾಹಿತ್ಯಯೋಗ ಸಿದ್ದಾಂತ ಸಂಪುಟ ೧೩., (೨೦೧೦) ವರಕವಿ ಡಾ॥ ದ.ರಾ ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳಿ.

೪. ದ.ರಾ ಬೇಂದ್ರೆ., ವಾಮನ ಬೇಂದ್ರೆ (ಸಂ)., ೨೦೧೧., ಔದುಂಬರ ಗಾಥೆ ವರಕವಿ ಡಾ॥ ದ. ರಾ ಬೇಂದ್ರೆಯವರ ಸಮಗ್ರ ಗದ್ಯ ಸಾಹಿತ್ಯ, ಸಾಹಿತ್ಯ ಯೋಗ: ಭಾಗ ೨ ಸಂಪುಟ ೧೪., ವರಕವಿ ಡಾ॥ ದ. ರಾ ಬೇಂದ್ರೆ ಸಂಶೋಧನಾ ಸಂಸ್ಥೆ, ಹುಬ್ಬಳಿ.